ಮರವಾಗುತ್ತಿತ್ತು ಹೇಗೆ? ಅದಕೆ ನೀರು ಆಹಾರ ನೀಡಿ ಪೊರೆಯುತ್ತಿತ್ತಾದರೂ ಹೇಗೆ? ಸತ್ತ ಪ್ರಾಣಿ, ಪಕ್ಷಿ, ಕೊರಡು ಕೊಳೆಯುತ್ತಿತ್ತಾದರೂ ಹೇಗೆ? ಕೊಳೆತು ಗೊಬ್ಬರವಾಗುತ್ತಿತ್ತು ಹೇಗೆ? ಗೊಬ್ಬರ ಮಣ್ಣಾಗಿ, ಮತ್ತೆ ಜೀವದಾಯಿನಿಯಾಗುತ್ತಿತ್ತು ಹೇಗೆ?' ಎಂದು ಯಾರೋ ಕವಿ ಕನವರಿಸಿದ್ದಾನಂತೆ.

ಈ ಮನುಷ್ಯ, ಮಣ್ಣಿಗೇ ಏನು, ಗಿಡ ಮರ ಬಳ್ಳಿಗಳಿಗೂ, ಪ್ರಾಣಿ ಪಕ್ಷಿ ಕ್ರಿಮಿ ಕೀಟಗಳಿಗೂ ಜೀವವಿಲ್ಲವೆಂದೇ ಭಾವಿಸಿದ್ದಾನೆನಿಸುತ್ತದೆ. ಈ ಪ್ರಪಂಚದ ಸಕಲ ಪ್ರಾಣಿ ಪಕ್ಷಿಗಳು ಮರಗಿಡಬಳ್ಳಿಗಳು ಇರುವುದು ತನಗಾಗಿ, ತಾನು ತಿನ್ನುವುದಕ್ಕೋಸ್ಕರವೇ, ತಾನು ಅನುಭವಿಸಿ ಮೆರೆಯುವುದಕ್ಕೋಸ್ಕರವೇ ಎಂದು ಭಾವಿಸಿಕೊಂಡಿದ್ದಾನೆ ಮೂಢ! ಎಂಥ ಭ್ರಮೆ ಅವನದ್ದು?

ಅವತ್ತು ಆನೆಯ ಮೇಲೆ ಕುಳಿತಿದ್ದ ಮನುಷ್ಯನನ್ನು ಕಂಡಿದ್ದೆ ಎಂದೆನಲ್ಲ! ಅದರ ನಂತರವೂ ಮತ್ತೆ ನಾನವನನ್ನು ಕಂಡದ್ದು ಆನೆ ಹಿಡಿಯುವ ಸಂದರ್ಭದಲ್ಲೇ! ಆ ದಟ್ಟ ಕಾಡಿಗೆ ಮನುಷ್ಯರು ಬರುತ್ತಿದ್ದುದೇ ಬಹುಶಃ ಆನೆ ಹಿಡಿಯಲಿಕ್ಕೇ ಇರಬೇಕು ಎಂದು ಆಗ ನಾನು ಭಾವಿಸಿದ್ದೆ. ಆತ ಎಲ್ಲಿ ವಾಸಿಸುತ್ತಿದ್ದಾನೆ, ಏನು ತಿಂದು ಬದುಕುತ್ತಿದ್ದಾನೆ ಎಂಬ ಯಾವ ವಿವರಗಳೂ ಇನ್ನೂ ಎಳೆಯನಾಗಿದ್ದ ನನಗಾಗ ಗೊತ್ತಾಗುತ್ತಿರಲಿಲ್ಲ. ವಿಶೇಷವಾಗಿ ಆನೆಯ ಬಗ್ಗೆಯೇ ನನಗೇಕೆ ಕಾಳಜಿಯೆಂದರೆ, ಅದು ಏನು ಸಿಕ್ಕರೂ ಸೊಂಡಿಲಲ್ಲಿ ಮುದುರಿ ತನ್ನ ಒಡಲೊಳಕ್ಕೆ ಸೇರಿಸಿಕೊಂಡುಬಿಡುತ್ತಿತ್ತು. ನಾನೂ ಎಲ್ಲಿ ಅದಕ್ಕೆ ಆಹಾರವಾಗಿ ಹೋಗಿಬಿಡುವೆನೋ ಎಂಬ ಆತಂಕ ಅನೇಕ ಸಾರಿ ಕಾಡಿದ್ದಿದೆ. ಕಾಡಿನಲ್ಲಿ ಹುಲಿ, ಸಿಂಹ, ಚಿರತೆಯಂಥ ಕ್ರೂರಾತಿಕ್ರೂರ ಪ್ರಾಣಿಗಳಿದ್ದರೂ ಅವುಗಳಿಂದ ಪ್ರಾಣಿಗಳಿಗಷ್ಟೇ ಭಯವೇ ವಿನಾ ನನಗಿರಲಿಲ್ಲ. ಏಕೆಂದರೆ ಅವು ಸಸ್ಯಾಹಾರಿಗಳಾಗಿರಲಿಲ್ಲವಾದ್ದರಿಂದ ನಮ್ಮ ಸುದ್ದಿಗೇ ಬರುತ್ತಿರಲಿಲ್ಲ.

ಅಷ್ಟರೊಳಗಾಗಲೇ ನಾನು ಕವಲೊಡೆದಿದ್ದೆ. ಹಿಂದೆ ಒಂದು ಆನೆ ನನ್ನ ಸುಳಿಯನ್ನು ಏನು ಮುರಿದುಹಾಕಿತ್ತೋ, ಅಲ್ಲಿಂದ ಕುಡಿಗಳು ಚಿಗುರೊಡೆದಿದ್ದವು. ಆ ಟಿಸಿಲೊಡೆದ ಕುಡಿಗಳೇ ಬಲಿತು ರೆಂಬೆಗಳಾಗಿದ್ದವು. ಎಲ್ಲ ರೆಂಬೆಗಳಿಂದಲೂ ನಾನು ಸಂವೇದನೆಗಳನ್ನು ಸ್ವೀಕರಿಸುವಷ್ಟು ಪ್ರಬುದ್ಧನಾಗುತ್ತಿದ್ದೆ. ಎಲ್ಲ ಎಂಟು ಕೊಂಬೆಗಳಿಗೂ ಒಮ್ಮೆಲೇ ಆಹಾರ ಒದಗಿಸುವಲ್ಲಿ ನನ್ನ ಬೇರುಗಳು ಕೆಲದಿನ ವಿಳಂಬ ಮಾಡಿದವು. ಯಾಕೆಂದರೆ ಅವುಗಳಿಗೆ ಎಷ್ಟು ಆಹಾರ ಬೇಕಾಗುತ್ತದೆಂದು ಆಗ ಅಂದಾಜು ಇರಲಿಲ್ಲ. ಯಾವಾಗ ಹೊಸಕೊಂಬೆಯ ಎಲೆಗಳು ಮಂಕಾಗಲಾರಂಭಿಸಿದವೋ ಆಗ ನನ್ನ ಬೇರುಗಳಿಗೆ ವಿಸ್ತರಿಸಿಕೊಳ್ಳಲು ಆದೇಶ ನೀಡಿದೆ. ಕೆಲಕ್ಷಣ ಮೇಲಿನ ಬೆಳವಣಿಗೆಯನ್ನು ನಿಲ್ಲಿಸಿ, ಕೆಳಗಿನ ವಿಸ್ತಾರದ ಕಡೆ ಗಮನಹರಿಸಿದೆ. ಸರಸರನೆ ಬೇರುಗಳು ಎಲ್ಲೆಲ್ಲ ಪಸರಿಸಿ ಆಹಾರ ಮತ್ತು ನೀರಿನ ಅಂಶವನ್ನು ಕಾಂಡಕ್ಕೆ ಒದಗಿಸಿದವು. ಪೂರಕವಾಗಿ ಎಲ್ಲಾ ಕೊಂಬೆಗಳಿಗೂ ಸಮವಾಗಿ ಹಂಚಿಕೆ ಮಾಡಿ ಎಲ್ಲ ಕೊಂಬೆಗಳೂ ಸಮಾನಾಂತರವಾಗಿ ಬೆಳೆಯುವಂತೆ ನೋಡಿಕೊಂಡೆ.

ನನ್ನಿಂದ ಅಷ್ಟು ದೂರದಲ್ಲಿ ದೊಡ್ಡದಾಗಿ ಬೆಳೆದಿದ್ದ ಎರಡು ಪೊದೆಗಳ ನಡುವಿನ ಜಾಗವನ್ನು ಆಯ್ದುಕೊಂಡು ಅದರಡಿಯಲ್ಲಿ ಎಂಟು ಹತ್ತು ಜನ ಸೇರಿಕೊಂಡು ಒಂದು ದೊಡ್ಡ ಗುಂಡಿಯನ್ನು ತೋಡುತ್ತಿದ್ದರು. ಹೊಸಮಣ್ಣಿನ ಗುರುತು ಕಾಣದಂತೆ ಮತ್ತು ಅಲ್ಲಿ ಗುಂಡಿಯಿದೆಯೆಂಬ ಭ್ರಮೆಯೇ ಬಾರದಂತೆ ಇನ್ನಷ್ಟು ಪೊದೆಗಳನ್ನು ಕಡಿದು ಮುಚ್ಚಿದರು.

ಕಾಡಾನೆಯ ಗುಂಪಿನ ಬಲಿಷ್ಠವಾದ ಮತ್ತು ಯುವ ಆನೆಯನ್ನು ಗುರುತಿಸಿ, ಪಳಗಿಸಿದ ನಾಲ್ಕಾರು ಆನೆಗಳ ತಂಡದ ನೆರವಿನಿಂದ ಗುಂಪಿನಿಂದ ಅದನ್ನು ಬೇರ್ಪಡಿಸಿ, ಇಡೀ ಕಾಡಿನ ಅಂತರಂಗವೇ ಅದುರಿ ಹೋಗುವಂತೆ ಘೀಳಿಡುತ್ತಿದ್ದ ಅದನ್ನು ಒತ್ತರಿಸಿ ಒತ್ತರಿಸಿ ದಬ್ಬುತ್ತ ಬಂದು ಆ ಗುಂಡಿಯ ದಾರಿಯತ್ತಲೇ ತೆರಳುವಂತೆ ನೋಡಿಕೊಳ್ಳುತ್ತಿದ್ದರು. ಅದಕ್ಕಾದರೂ ಏನು ಗೊತ್ತು ಪಾಪ, ಅಲ್ಲಿ ತನ್ನ ಖೆಡ್ಡಾವಿದೆಯೆಂದು. ಎರಡು ಪೊದೆಗಳ ನಡುವೆ ಅದು ತಪ್ಪಿಸಿಕೊಳ್ಳಲು ನುಸುಳಿದಾಕ್ಷಣವೇ ಅದರ ಭಾರವನ್ನು ತಾಳಲಾರದ ಮುಳ್ಳುಪೊದೆಗಳ ಆ ಚಪ್ಪರ ಅದುಮಲ್ಪಟ್ಟು, ಆನೆ ಮುಗ್ಗರಿಸಿ ಗುಂಡಿಯೊಳಕ್ಕೆ ಪಲ್ಟಿ ಹೊಡೆಯಿತು. ಮುಗ್ಗರಿಸಿದ ಬಿರುಸಿಗೆ ಅದರ ಹಣೆ ನೆಲಕ್ಕೆ ಬಿದ್ದು ಅದರ ಮೇಲೆ ಇಡೀ ದೇಹದ ಭಾರ ಬಿದ್ದುದರಿಂದ ಅದು ಕಂಗಾಲಾಗಿ ಇಡುಕಿರಿದ ಜಾಗದಲ್ಲೇ ತಡವರಿಸಿ ಎದ್ದು ತನ್ನ ಜಂಘಾಬಲವೇ ಕುಸಿದುಹೋಗುವಂತೆ ಅಬ್ಬರಿಸುತ್ತಾ ಅತ್ಯುಗ್ರವಾಗಿ ಘೀಳಿಡಲಾರಂಭಿಸಿತು. ಅದರ ಆರ್ಭಟಕ್ಕೆ ಇಡೀ ಕಾಡಾದ ಕಾಡೇ ಬೆದರಿ ಅವಿತುಕೊಂಡು ಕುಳಿತಿತು.

ಆನೆ ಮೇಲೇರಿ ಬರಲು ಹರ ಸಾಹಸ ಮಾಡಿತು. ಎಲ್ಲಿಂದ ಮುಂಗಾಲನ್ನು ಏರಿಸಿ ಮೇಲೇರಲು ಪ್ರಯತ್ನಿಸಿದರೂ ಅದರ ಭಾರಕ್ಕೇ ಅದು ಕುಸಿದು ಬೀಳುತ್ತಿತ್ತು. ಅದನ್ನು ಅಲ್ಲಿಯೇ ಬಿಟ್ಟು ಜನಗಳೆಲ್ಲ ತಮ್ಮ ಆನೆಗಳೊಂದಿಗೆ ಹೊರಟುಹೋದರು. ನಾನು, ಪಾಪ ಕಾಡಿನಲ್ಲಿ ಹಾಯಾಗಿದ್ದ ಆನೆಗೇಕೆ ಇಂಥ ಶಿಕ್ಷೆ ಕೊಟ್ಟರೆಂದು ಯೋಚಿಸಿದರೂ ಆ ಕ್ಷಣಕ್ಕೆ ಉತ್ತರ ಹೊಳೆಯಲಿಲ್ಲ.

ಪ್ರತಿ ನಿಮಿಷ ನಿಮಿಷಕ್ಕೂ ಅದರ ಘೀಳಾಟ ಕೇಳೀ ಕೇಳಿ ನಾನು ಆರ್ದ್ರನಾಗಿ ಹೋದೆ. ಎಲ್ಲಿ ಅದು ಮೇಲೇರಿ ಬಂದು ನನ್ನನ್ನು ಮುಗಿಸಿಬಿಡುವುದೋ ಎಂಬ ಆತಂಕ ನನಗೆ. ಆದರೆ ಅದರ ಜಂಘಾಬಲವೇ ಅದುರಿಹೋದಂಥ ಘೀಳಾಟದ ಸಂದೇಶವನ್ನು ಆಲಿಸಿಕೊಂಡ ಆನೆಗಳ ಗುಂಪೇ ಅಲ್ಲಿ ನೆರೆಯಿತು. ಕೆಲವು ತಮ್ಮ ಸೊಂಡಿಲನ್ನು ಅದಕ್ಕೆ ಆಸರೆಯಾಗಿ ನೀಡಿ ಎಳೆದುಕೊಳ್ಳಲು ಪ್ರಯತ್ನಿಸಿದವು. ಆದರೆ ಅದರ ಟನ್‌ಗಟ್ಟಲೇ ಭಾರವನ್ನು ಆ ಸೊಂಡಿಲು ತಾನೇ ಹೇಗೆ ಸಹಿಸೀತು? ಹೀಗೇ ದಿನಗಟ್ಟಲೆ ಅದು, ಘೀಳಿಡುವುದು, ಉಳಿದ ಆನೆಗಳು ಅದರ ನೆರವಿಗೆ ಧಾವಿಸುವುದು ನಡೆದೇ ಇತ್ತು. ನಾನಂತೂ ಉಳಿದೆಲ್ಲ ಆನೆಗಳು ಎಲ್ಲಿ ಹತಾಶೆ ಮತ್ತು ಸಿಟ್ಟಿನಿಂದ ತಮ್ಮ ದಂತವನ್ನು ನನ್ನ ಬುಡಕ್ಕೆ ತೂರಿ ನನ್ನ ಬೇರನ್ನೇ ಕಿತ್ತುಹಾಕಿಬಿಡುತ್ತವೋ ಎಂದು ಗಾಬರಿಬಿದ್ದುಹೋಗಿದ್ದೆ. ಆದರೆ ಪುಣ್ಯ, ನನ್ನ ಒಂದೆರಡು ಹರೆಗಳನ್ನು ಸೊಂಡಿಲಿನಿಂದ ಮುರಿದು ಬಾಯಿಗೆ ತುರುಕಿಕೊಂಡು ದಣಿವಾರಿಸಿಕೊಂಡವೇ ವಿನಾ ನನ್ನನ್ನು ಆಮೂಲಾಗ್ರವಾಗಿ ಚಿಂದಿ ಉಡಾಯಿಸಿಬಿಡಲಿಲ್ಲ. ಕೆಳಗೆ ಬಿದ್ದ ಆನೆಯ ಸ್ಥಿತಿಯನ್ನು ಕಂಡು ತಮ್ಮ ಕಣ್ಣಲ್ಲೂ ನೀರು ಹರಿಸುತ್ತಾ, ಹಸ್ತ ಲಾಘವ ಮಾಡಿದಂತೆ ಸೊಂಡಿಲನ್ನು ಸವರಿ ಸವರಿ ಮರುಕ ವ್ಯಕ್ತಪಡಿಸುತ್ತಾ ಎರಡು ಮೂರು ದಿನ ಅಲ್ಲೇ ಸುತ್ತಾಡಿಕೊಂಡಿದ್ದವುಗಳು, ಯಾವಾಗ ಹಸಿವಿನಿಂದ, ಪೆಟ್ಟಿನಿಂದ ಕಂಗಾಲಾಗಿ ಒಳಗಿದ್ದ ಆನೆಯ ರಂಪಾಟದ ದನಿ ಬತ್ತಿಹೋಯಿತೋ ಆವಾಗ ತಮ್ಮ ಆಹಾರದ ದಾರಿಯನ್ನು ಹಿಡಿದುಕೊಂಡು ಮುಂದೆ ಹೋದವು.

ನಾಲ್ಕೈದು ದಿನಗಳಾದ ಮೇಲೆ ಮತ್ತೆ ಅದೇ ಜನರ ಗುಂಪು ಒಂದಷ್ಟು ದಪ್ಪದಪ್ಪದ ಹಗ್ಗಗಳೊಂದಿಗೆ ಅಲ್ಲಿ ಪ್ರತ್ಯಕ್ಷವಾಯಿತು. ಅವರು ಮಾತಾಡಿದ್ದನ್ನು ಕೇಳಿಸಿಕೊಂಡ ನನಗೆ ಅರ್ಥವಾದದ್ದೇನೆಂದರೆ ಅನ್ನಾಹಾರವಿಲ್ಲದೇ ಅದರ ಮದ ಇಳಿಸಿದರೆ, ಅದರ ಶಕ್ತಿ ಕುಂದಿಹೋಗಿ ತಾವು ಹೇಳಿದಂತೆ ಕೇಳುತ್ತದೆಂಬುದು. ಅದ್ಯಾರೋ ರಾಜ ತನ್ನ ಸಾಮ್ರಾಜ್ಯದ ಸೈನ್ಯವನ್ನು ಬಲಪಡಿಸಿಕೊಳ್ಳಲು ಕಾಡಾನೆಗಳನ್ನೆಲ್ಲ ಹಿಡಿದು ಪಳಗಿಸಿಕೊಳ್ಳುತ್ತಿದ್ದಾನಂತೆ. ವಯಸ್ಸಾದ, ಗಾಯಗೊಂಡ ಆನೆಗಳನ್ನೆಲ್ಲ ಮಠ, ದೇವಸ್ಥಾನಗಳಿಗೆ ದಾನ ನೀಡಿ ಸೈನ್ಯದಲ್ಲಿ ಬಲಾಢ್ಯವಾದ ಆನೆಗಳನ್ನು ಮಾತ್ರ ಇರಿಸಿಕೊಳ್ಳುತ್ತಿದ್ದಾನಂತೆ.

ಆಳುಗಳು ಸ್ವಲ್ಪ ದೂರದಿಂದ ಖೆಡ್ಡಾಕ್ಕೆ ಇಳಿಜಾರಾಗಿ ಕಾಲುವೆಯಂಥ ಜಾಡು ತೆಗೆಯಲಾರಂಭಿಸಿದರು. ಕೊನೆಗೆ ಗೋಡೆಯಷ್ಟು ಗಾತ್ರದ ದಿಂಡನ್ನು ಉಳಿಸಿ ಮೇಲೆದ್ದರು. ಸುತ್ತುವರೆದಿದ್ದ ಪಳಗಿಸಿದ್ದ ಆನೆಗಳು ಆ ಅಡ್ಡಗೋಡೆಯನ್ನು ಇನ್ನೊಂದು ಆನೆಯಿಂದ ಉರುಳಿಸಲು ಆದೇಶ ನೀಡಿದರು. ಧೂಳಿನಿಂದಾವೃತವಾದ ಗುಂಡಿಯಿಂದ ಹೊರಬರಲು ದಾರಿ ಕಂಡುಕೊಂಡ ಆನೆ ಭಯಂಕರ ಹುಮ್ಮಸ್ಸಿನಿಂದ ಮೇಲೆ ನುಗ್ಗಿತು. ಆದರೇನು? ಅಷ್ಟರಲ್ಲಾಗಲೇ ಅದರ ಕಾಲುಗಳು ರಟ್ಟೆಗಾತ್ರದ ಹಗ್ಗದಿಂದ ಬಂಧಿಸಲ್ಪಟ್ಟಿದ್ದವು. ಉಳಿದ ಆನೆಗಳು ಅದರ ಬಲವನ್ನು ನಿಗ್ರಹಿಸಿ ನಾಲ್ಕೂ ಕಡೆಗೆ ಸಮಾನಾಂತರವಾಗಿ ಎಳೆಯುತ್ತಾ, ಅದನ್ನು ಒಂದೇ ಕಡೆ ನಿಲ್ಲುವಂತೆ ಮಾಡಿ ತಹಬಂದಿಗೆ ತಂದವು. ಮತ್ತೆ ನಾಲ್ಕೂ ಕಡೆ ಆನೆಗಳಿಂದ ಒತ್ತುತ್ತಾ, ಒತ್ತುತ್ತಾ ಅದನ್ನು ಆವರಿಸಿಕೊಳ್ಳುತ್ತಾ ಬಂಧನದ ಸ್ಥಿತಿಯಲ್ಲೇ ತಮ್ಮ ನೆಲೆಯತ್ತ ಕರೆದೊಯ್ಯಲಾರಂಭಿಸಿದರು...

ಒಂದು ವಾರ ಕಾಲದಿಂದ ಅದರ ಅಬ್ಬರ, ಹೊಯ್ದಾಟದ ಸದ್ದುಗದ್ದಲಕ್ಕೆ ನಲುಗಿ ಹೋಗಿದ್ದ ನಾನೂ ನೆಮ್ಮದಿಯ ನಿಟ್ಟುಸಿರುಬಿಟ್ಟೆ. ಸದ್ಯ, ನನ್ನನ್ನು ಕೊಂದು ತಿನ್ನಬಲ್ಲ ಒಂದು ಪ್ರಾಣಿಯ ಸಂಖ್ಯೆ ಕಡಿಮೆಯಾಯಿತಲ್ಲ ಎಂಬ ಸ್ವಾರ್ಥವೂ ಅದರಲ್ಲಿ ಸೇರಿತ್ತು.

(ಸಶೇಷ)